

ಅರುಣ ಪಿ. ಭಟ್ಟ

## ವಾರಭವಿಷ್ಯ: 16.03.2023ರಿಂದ 22.03.2023ರವರೆಗೆ



**ಮೇಷ**

ಕುಟುಂಬ ಬಗ್ಗೆ ಹೆಮ್ಮೆ ಪಡುವಂಥ ಬೆಳವಣಿಗೆ ಆಗುತ್ತದೆ. ನಿಮ್ಮ ವೈಯಕ್ತಿಕ ಶ್ರಮದಿಂದ ಹೆಚ್ಚಿನ ಯಶಸ್ಸು ಪಡೆಯಲು ಸಾಧ್ಯವಾಗುತ್ತದೆ. ಆ ಕಾರಣಕ್ಕಾಗಿ ಹಲವು ಕೆಲಸ– ಕಾರ್ಯಗಳನ್ನು ಪೂರೈಸಲಾಗುತ್ತದೆ. ಇದರಿಂದ ನಿಮಗೆ ಸಂತುಷ್ಟವಾಗುತ್ತದೆ. ಇನ್ನು ನಿಮ್ಮ ಸಹೋದ್ಯೋಗಿಗಳ ಜತೆಗೆ ಇರುವ ಭಿನ್ನಾಭಿಪ್ರಾಯಗಳನ್ನು ಮರೆಯಲು ಪ್ರಯತ್ನ ಮಾಡುತ್ತೀರಿ. ಶುಭದಿನ: 18. ಗಣಪತಿ ಸುಬ್ರಹ್ಮಣ್ಯ ಜಪ ಮಾಡಿರಿ.



**ವೃಷಭ**

ಶುಭ ಕಾರ್ಯವನ್ನು ಆಯೋಜಿಸುವ ಸಾಧ್ಯತೆ ಇದೆ. ಈ ವಾರದ ಮೊದಲಾರ್ಧದಲ್ಲಿ ಗ್ರಹಗತಿಗಳು ಅನುಕೂಲಕರವಾಗಿವೆ. ಈ ಅವಧಿಯಲ್ಲಿ ಅತಿ ಮುಖ್ಯವಾದ ಕೆಲಸಗಳನ್ನು ಮಾಡಿಕೊಂಡು ಬಿಡಿ. ಉದ್ಯೋಗ ಸ್ಥಳದಲ್ಲಿ ನಿಮ್ಮ ಗೌರವ, ವರ್ಚಸ್ಸು ಹೆಚ್ಚುವ ಸಾಧ್ಯತೆ ಇದೆ. ಹಿರಿಯ ಸಹೋದ್ಯೋಗಿಗಳ ಜೊತೆಗೆ ನಿಮ್ಮ ಬಾಂಧವ್ಯ ಗಟ್ಟಿ ಆಗಲಿದೆ. ಶುಭದಿನ: 19. ಲಕ್ಷ್ಮೀನಾರಾಯಣ ಹೃದಯ ಪಾರಾಯಣ ಮಾಡಿರಿ.



**ಮಿಥುನ**

ಆರೋಗ್ಯ ಸುಧಾರಿಸುವುದು. ಅಕಸ್ಮಾತ್ ಖರ್ಚು ಹೆಚ್ಚಾಗುವ ಸಂಭವ. ಆಸ್ತಿ ಖರೀದಿ ಬಗ್ಗೆ ಚಿಂತನೆ. ಕಲಾವಿದರಿಗೆ ಸಾಹಿತಿಗಳಿಗೆ ಉತ್ತಮ ವಾರ. ಸಂಘ ಸಂಸ್ಥೆಗಳಿಂದ ಧನಲಾಭ. ಶತ್ರುಗಳು ಹಿಂದೆ ಸರಿಯುವರು. ವೃತ್ತಿ ವ್ಯವಹಾರದಲ್ಲಿ ಲಾಭ ಹೆಚ್ಚಿದೆ. ಸರಕಾರಿ ಕೆಲಸಗಳು ಶೀಘ್ರ ಆಗುವುದು. ಸಾಮಾಜಿಕ ಮನ್ನಣೆ ದೊರೆಯುವುದು. ಶುಭದಿನ: 21. ಚಂಡಿ ಪಾರಾಯಣ ಮಾಡಿರಿ.



**ಕಟಕ**

ನವೋಲ್ಲಾಸ ಬರುವುದು. ಧರ್ಮ ಕಾರ್ಯ, ದಾನ ಮಾಡಲು ಒಂದಿಷ್ಟು ಖರ್ಚು ಆಗಲಿದೆ. ನಿಮ್ಮಿಂದ ಮಿತ್ರರಿಗೆ ಸಹಾಯ ಆಗುವುದು. ವ್ಯಾಪಾರದಲ್ಲಿ ಅಧಿಕ ಲಾಭ. ಹಳೆಯ ಮಿತ್ರರ ಆಗಮನ. ಹಲವು ದಿನಗಳ ಸಮಸ್ಯೆ ಬಗೆಹರಿಯುವುದು. ಹೊಟ್ಟೆನೋವಿನ ಕಾಟ. ಮನೆಯಲ್ಲಿ ಸಂಭ್ರಮ. ಮಕ್ಕಳಿಂದ ಶುಭವಾರ್ತೆ ಸಿಗಲಿದೆ. ಮಹತ್ವದ ಕಾಗದ ಪತ್ರಗಳ ರಕ್ಷಣೆ. ಸಹೋದರರ ಸಹಾಯ. ಶುಭದಿನ: 20. ಶಿವ ಕವಚ ಓದಿರಿ.



**ಸಿಂಹ**

ಕುಟುಂಬ ಸದಸ್ಯರ ಜತೆಗೆ ಹೆಚ್ಚಿನ ಸಮಯ ಕಳೆಯುವ ಸಾಧ್ಯತೆ ಇದೆ. ಇದೇ ವೇಳೆ ಕುಟುಂಬದ ಸದಸ್ಯರಿಗೆ ಕೆಲವು ಕೆಲಸಗಳನ್ನು ವಹಿಸುತ್ತೀರಿ. ಈ ಹಿಂದೆಂದಿಗಿಂತಲೂ ಈ ವಾರ ಹೆಚ್ಚು ಚಟುವಟಿಕೆಯಿಂದ ನೀವು ಇರಬೇಕಾಗುತ್ತದೆ. ಭೂ ವ್ಯಾಜ್ಯವೊಂದಕ್ಕೆ ಶ್ರಮ ಹಾಕಲಿದ್ದೀರಿ. ಆದರೆ ವಿರೋಧಿ ಪಾಳಯದವರು ಈ ವಿಚಾರದಲ್ಲಿ ಇನ್ನಷ್ಟು ಸಮಸ್ಯೆಗೆ ಎಳೆಯಲಿದ್ದಾರೆ. ಶುಭದಿನ: 18. ಸೌಂದರ್ಯ ಲಹರಿ ಪಠಿಸಿ.



**ಕನ್ಯಾ**

ಎಂಜಿನಿಯರ್ ಕ್ಷೇತ್ರದವರಿಗೆ ಹೆಚ್ಚಿನ ಅವಕಾಶಗಳು ಹುಡುಕಿಕೊಂಡು ಬರುತ್ತವೆ. ಕುಟುಂಬದೊಳಗೆ ಸಂತಸದ ವಾತಾವರಣ ಇರುತ್ತದೆ. ಈ ವರೆಗಿನ ನಿಮ್ಮ ಆದಾಯ ಮೂಲಗಳಿಂದ ಬರುವ ಗಳಿಕೆ ಮತ್ತಷ್ಟು ಹೆಚ್ಚಾಗಲಿದೆ. ವಾರದ ಮಧ್ಯದಲ್ಲಿ ಖರ್ಚು ಹೆಚ್ಚಾಗುವ ಸಾಧ್ಯತೆಗಳಿವೆ. ವಾರದ ಅಂತ್ಯಕ್ಕೆ ಸರಿಯುತ್ತಾ ಕೌಟುಂಬಿಕ ಜೀವನ ಸಂತುಷ್ಟವಾಗಿ ಇರುತ್ತದೆ. ಶುಭದಿನ: 22. ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿರಿ.



**ತುಲಾ**

ಈ ವಾರ ವೈಯಕ್ತಿಕ ಮಹತ್ತರ ಪ್ರಗತಿ ಕಾಣುವ ಯೋಗ ಇದೆ. ವೈದ್ಯಕೀಯ, ಕಲಾ ವೃತ್ತಿಯವರಿಗೆ ಅತ್ಯುತ್ತಮ ಲಾಭ. ಸೇವಾ ವಲಯದಲ್ಲಿ ಕಾರ್ಯ ನಿರ್ವಹಿಸುವವರಿಗೆ ಪ್ರತಿಭೆಯನ್ನು ಪ್ರದರ್ಶಿಸಲು ಅವಕಾಶಗಳಿವೆ. ಪ್ರಗತಿ ಮತ್ತಷ್ಟು ವೇಗ ಪಡೆದುಕೊಳ್ಳುತ್ತದೆ. ಶೈಕ್ಷಣಿಕ ಅರ್ಹತೆ ಹೆಚ್ಚಿಸಿಕೊಳ್ಳಲು ಪ್ರಯತ್ನಿಸುತ್ತೀರಿ. ಆರೋಗ್ಯವು ಚೆನ್ನಾಗಿರುತ್ತದೆ. ಶುಭದಿನ: 16. ದೇವ್ಯಪರಾದ ಕ್ಷಮಾಪನಾ ಸ್ತೋತ್ರ ಪಠಿಸಿರಿ.



**ವೃಶ್ಚಿಕ**

ಬಹಳ ಮುಖ್ಯವಾದ ಪಟ್ಟಿಯೊಂದನ್ನು ಸಿದ್ಧ ಮಾಡಿಕೊಳ್ಳುವುದಕ್ಕೆ ಸಿದ್ಧರಾಗುತ್ತೀರಿ. ಕಣ್ತಪ್ಪಿನಿಂದ ಕೆಲವು ಬಿಟ್ಟು ಹೋಗುವ ಸಾಧ್ಯತೆ ಇದೆ. ಸಮಯದ ಕೊರತೆ ವಿಪರೀತವಾಗಿ ಕಾಡುತ್ತದೆ. ವಾರದ ಮಧ್ಯ ಭಾಗದಲ್ಲಿ ವ್ಯಾಪಾರ ವ್ಯವಹಾರಗಳ ವಿಸ್ತರಣೆಗೆ ಶ್ರಮ ಹಾಕುತ್ತೀರಿ. ಆರೋಗ್ಯ ಉತ್ತಮವಾಗಿರುತ್ತದೆ. ನಿಮ್ಮ ಆರ್ಥಿಕ ಸ್ಥಿತಿ ಉತ್ತಮವಾಗಿರುತ್ತದೆ. ಶುಭದಿನ: 20. ಶ್ರೀ ದುರ್ಗಾಪಾರಾಯಣ ಮಾಡಿರಿ.



**ಧನಸ್ಸು**

ಆಸ್ತಿ ಖರೀದಿಗೆ ಪ್ರಯತ್ನಿಸುತ್ತಿರುವವರು ಸಂಬಂಧಪಟ್ಟ ಕಾಗದಪತ್ರಗಳನ್ನು ಕೂಲಂಕಷವಾಗಿ ಪರಿಶೀಲನೆ ನಡೆಸಲಿದ್ದೀರಿ. ಆರೋಗ್ಯ ಸ್ಥಿತಿ ಪೂರಕವಾಗಿ ಇರುವುದಿಲ್ಲ. ವೈಯಕ್ತಿಕ ಸಂಬಂಧದಲ್ಲಿ ಕೆಲವು ಕಹಿ ಬೆಳವಣಿಗೆಗಳು ಆಗಲಿವೆ. ವಾರದ ಅಂತ್ಯಕ್ಕೆ ಸರಿಯುತ್ತಾ ಕುಟುಂಬದವರ ಬೆಂಬಲ ದೊರೆಯಲಿದೆ. ಸೋದರ– ಸೋದರಿಯರ ಜತೆಗೆ ಬಾಂಧವ್ಯ ಗಟ್ಟಿಯಾಗುತ್ತದೆ. ಶುಭದಿನ: 17. ಶ್ರೀ ವೆಂಕಟೇಶ್ವರ ಸ್ತೋತ್ರ ಪಠಿಸಿರಿ.



**ಮಕರ**

ವಾರದ ಶುರುವಿನಲ್ಲೇ ಉದ್ಯಮದಲ್ಲಿ ಪ್ರಗತಿ ಕಾಣಿಸುತ್ತದೆ. ಪ್ರತಿಷ್ಠಿತ ಸಂಸ್ಥೆಯೊಂದರ ಜತೆಗೆ ಮಹತ್ವದ ಒಪ್ಪಂದಕ್ಕೆ ಸಹಿ ಹಾಕುವ ಸಾಧ್ಯತೆ ಇದೆ. ವ್ಯಾಪಾರ ವಿಸ್ತರಣೆ ಬಗ್ಗೆ ಮುಖ್ಯವಾದ ತೀರ್ಮಾನವನ್ನು ಕೈಗೊಳ್ಳಲಿದ್ದೀರಿ. ವೈವಾಹಿಕ ಜೀವನ ಸಂತೋಷದಾಯಕವಾಗಿ ಇರುತ್ತದೆ. ವಾರದ ಮಧ್ಯಭಾಗದಲ್ಲಿ ಉದ್ಯೋಗ ನಿಮಿತ್ತವಾಗಿ ಪ್ರಯಾಣ ಮಾಡಬೇಕಾಗುತ್ತದೆ. ಶುಭದಿನ: 16. ಕಾಲಭೈರವನ ಸೇವೆ ಮಾಡಿರಿ.



**ಕುಂಭ**

ವಾರದ ಶುರುವಿನಲ್ಲಿ ನಿಮ್ಮ ಹಣದ ಸದುಪಯೋಗ ಮಾಡಿಕೊಳ್ಳುವ ಬಗ್ಗೆ ಯೋಜನೆ ರೂಪಿಸಲಿದ್ದೀರಿ. ಆ ನಂತರ ಅದರ ಅನುಷ್ಠಾನಕ್ಕಾಗಿ ಹಾಕುವ ಶ್ರಮಕ್ಕೆ ನಿರೀಕ್ಷಿತ ಫಲಿತಾಂಶ ಕೂಡ ದೊರೆಯಲಿದೆ. ಮಾರಾಟ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುವವರಿಗೆ ಲಾಭ ಪಡೆಯಲು ಅತ್ಯುತ್ತಮ ಅವಕಾಶಗಳಿವೆ. ವಾರದ ಅಂತ್ಯಕ್ಕೆ ಸರಿಯುತ್ತಾ ಆರೋಗ್ಯ ಸುಧಾರಿಸುತ್ತದೆ. ಶುಭದಿನ: 20. ಗಣಪತಿಗೆ ದೂರ್ವಾರ್ಚನೆ ಮಾಡಿರಿ.



**ಮೀನ**

ವಾರದ ಆರಂಭದಲ್ಲಿ ಉನ್ನತ ಶಿಕ್ಷಣಕ್ಕೆ ಯತ್ನಿಸುತ್ತಿರುವವರಿಗೆ ಯಶಸ್ಸು ದೊರೆಯಬಹುದು. ಈ ಅವಧಿಯಲ್ಲಿ ದೇವತಾ ಆರಾಧನೆಗೆ ನಿಮ್ಮ ಶ್ರಮ ಹಾಕುತ್ತೀರಿ. ಬಹಳ ಒತ್ತಡ ಹಾಕಿ ನಿಮ್ಮಿಂದ ಕೆಲಸ ತೆಗೆಸುವ ಯತ್ನಗಳಾಗುತ್ತವೆ. ಉದ್ಯೋಗ ಸ್ಥಳದಲ್ಲಿ ಭಾವನಾತ್ಮಕವಾಗಿ ಕೆಲವು ನಿರ್ಧಾರಗಳನ್ನು ತೆಗೆದುಕೊಳ್ಳಲಿದ್ದೀರಿ. ಈ ಅವಧಿಯಲ್ಲಿ ಕೆಮ್ಮು ನೆಗಡಿ ಕಾಡಬಹುದು. ಶುಭದಿನ: 18. ಕನಕಧಾರಾ ಸ್ತೋತ್ರ ಪಠಣಮಾಡಿರಿ.